ಅಂದುಕೊಂಡೆ. ಒಬ್ಬನೇ ಮಗ. ಅವನನ್ನು ಕಳೆದುಕೊಂಡು ಏನು ಮಾಡುವುದು? ಉಳಿಸಿಕೊಳ್ಳುವ ಯಾವ ಮಾರ್ಗವೂ ಇಲ್ಲವೇ?

ಯೋಚಿಸುತ್ತ ನಾನೂ ಅಸ್ವಸ್ಥನಾಗತೊಡಗಿದೆ. ನಮಗೆ, ಗಂಡ ಹೆಂಡತಿಗೆ ಈ ವಿಷಯ ಬಾಯೊಡೆದು ಮಾತನಾಡಲೂ ಧೈರ್ಯವಿಲ್ಲ. ಇಷ್ಟಕ್ಕೆ ಸರಿಯಾಗಿ ಇವನು ಎರಡು ದಿನ ಕಣ್ಣೊಡೆಯಲೂ ಇಲ್ಲ. ಸುಡು ನೀರಿಗಿಂತಲೂ ಇವನ ಮೈ ಬಿಸಿಯಾಗಿ ಸುಡುತ್ತಿತ್ತು. ಡಾಕ್ಟರು ಬೇರೆ, ಎರಡು ದಿನ ಬಿಟ್ಟು ಬರುವುದಾಗಿ ಹೇಳಿ ಹೋಗಿದ್ದರು. ಅವರು ಕೊಟ್ಟ ಮಾತ್ರೆಗಳಿದ್ದವು. ಎಲ್ಲ ಸೂಚನೆ ಪಾಲಿಸುತ್ತಲೇ ಇದ್ದೆವು. ನರಸಿಂಹಾಷ್ಟಕ ಜಪಿಸುತ್ತಲೇ ಇದ್ದೆ. ಅದನ್ನು ನಿಲ್ಲಿಸಲೇ ಇಲ್ಲ, ಅನ್ನಿ. ನರಸಿಂಹ ಕವಚ, ಶತ ನಾಮ, ಸಹಸ್ರ ನಾಮ ಎಲ್ಲ ಜಪವೂ ನಡೆಯುತ್ತಲೇ ಇತ್ತು. ಒಂದು ಹಂತದಲ್ಲಿ ಇವಳು ಮಗನಿಗಿಂತ ಹೆಚ್ಚಾಗಿ ನನ್ನ ಕುರಿತು ಗಾಬರಿಯಾದಳು. ಹೆಣ್ಣುಮಕ್ಕಳ ಧೈರ್ಯ ದೊಡ್ಡದು. "ಅರೇ, ನಮಗೆ ತಿಳಿದುದೆಲ್ಲವನ್ನೂ ಮಾಡಿದ್ದೇವೆ, ಡಾಕ್ಟರು ಔಷಧಿ ಕೊಟ್ಟಿದ್ದಾರೆ. ಇಷ್ಟರ ಮೇಲೆ ನಾವು ಇನ್ನೇನು ಮಾಡಲು ಸಾಧ್ಯ? ಒಂದು ಕೆಲಸ ಮಾಡಿ, ಹೋಗಿ. ಕುಲದೇವರಿಗೆ ಹೋಗಿ ನಮಸ್ಕಾರ ಮಾಡಿ. ಹಣ್ಣು ಕಾಯಿ ಮಾಡಿಕೊಂಡು ಬನ್ನಿ" ಎಂದಳು. ಸರಿ ಅನ್ನಿಸಿತು. ಮಿಂದು ಮನೆಯಲ್ಲಿ ದೇವರ ಪೂಜೆ ಮುಗಿಸಿ ನಮ್ಮ ಕುಲದೇವರು ನರಸಿಂಹನ ಗುಡಿಗೆ ಪೂಜೆಗೆ ಹೊರಟೆ. ಮಡಿಯಲ್ಲಿ ಹೋದರೆ ಗರ್ಭಗುಡಿಗೇ ಹೋಗಿ ಪೂಜೆ ಸಲ್ಲಿಸುವ ಅವಕಾಶ ನಮ್ಮ ಗುಡಿಯಲ್ಲಿದೆ. ಅಂತೆಯೇ ಒಳಹೋಗಿ ದೇವರ ವಿಗ್ರಹಕ್ಕೆ ಜಲಾಭಿಷೇಕ ಮಾಡಿದೆ. ಅಂದು ನಾನು ಹೇಳದೇ ಬಿಟ್ಟ ನರಸಿಂಹನ ಸ್ತೋತ್ರವಿಲ್ಲ, ಮಂತ್ರವಿಲ್ಲ. ಗಂಟೆಗಟ್ಟಲೆ ಪೂಜೆ ಮಾಡಿದೆ, ನರಸಿಂಹ ದೇವರಲ್ಲಿ ಎಷ್ಟು ಲೀನವಾಗಿಬಿಟ್ಟಿದ್ದೆ ಎಂದರೆ ನಾನೇನು ಮಾಡುತ್ತಿದ್ದೇನೆ, ಯಾಕೆ ಬಂದಿದ್ದೇನೆ ಎಂಬುದೂ ಕೆಲ ನಿಮಿಷಗಳ ಮಟ್ಟಿಗಾದರೂ ಮರೆತೇ ಹೋಯಿತು. ಮನಃ ಪೂರ್ತಿ ಮಂತ್ರಗಳನ್ನು ಒಪ್ಪಿಸಿದ ಮೇಲೆ ಹಣ್ಣು ಕಾಯಿ ನೈವೇದ್ಯ ಮಾಡಿ ಗರ್ಭಗುಡಿಯಿಂದ ಹೊರಬಂದು ಗಂಟೆ ಹೊಡೆದು ನಮಸ್ಕರಿಸಿದೆ. "ಹೋಗಿ ಬರ್ತೇನಪ್ಪಾ" ಅಂದೆ.

ಹೌದು, ಹಾಗೆ ಹೇಳಿದೆ. ದೀರ್ಘ ದಂಡ ಪ್ರಣಾಮ ಮಾಡಿ ಎದ್ದವನು ಒಮ್ಮೆಲೇ ಕ್ರುದ್ಧನಾದೆ. ಬ್ರಹ್ಮಾಂಡ ಸಿಟ್ಟು ತಲೆಗೇರಿ ಹೋಯಿತು. ದೇವರ ಮೂರ್ತಿಗೆ ಕೈ ತೋರಿಸಿ ಕಿರುಚಲಾರಂಭಿಸಿದೆ: "ಯಾವ ಸೀಮೆ ದೇವರಯ್ಯಾ ನೀನು? ಮಾಡುವಷ್ಟೂ ಪೂಜೆ ಮಾಡಿಸಿಕೊಂಡು ಭಕ್ತರಿಗೇ ಕಷ್ಟ ಕೊಡುತ್ತಿ. ನನ್ನ ಮಗ ನಿನಗೇನಯ್ಯಾ ಅನ್ಯಾಯ ಮಾಡಿರೋದು? ಅರಿಯದ ಮಕ್ಕಳನ್ನು ಗೋಳಾಡಿಸುತ್ತಿ. ನಾವು ಕುಟುಂಬದವರು ಯಾವಾಗಲಾದರೂ ನಿನಗೆ ತಪ್ಪು ನಡೆದಿದ್ದೇವೇನು? ನಿನ್ನ ವರ್ಷದ ಪೂಜೆಗಳನ್ನು ಸಲ್ಲಿಸಲಿಲ್ಲ? ಪಾದಗಾಣಿಕೆ ಒಪ್ಪಿಸಲಿಲ್ಲ? ತೇರು, ಉತ್ಸವ ನಡೆಸಲಿಲ್ಲ? ಅದಕ್ಕೆ ಪ್ರತಿಯಾಗಿ ನೀನು ಮಾಡ್ತಿರೋದು ಇದು. ಈ ಕಲ್ಯಾಣ ಗುಣಕ್ಕೆ ನಾವು ನಿನ್ನ ಸ್ತುತಿ ಮಾಡಬೇಕು. ಇರೋ ಒಬ್ಬ ಮಗನನ್ನು ಕಳೆದುಕೊಂಡು ನಾವೇನಪ್ಪಾ ಮಾಡಬೇಕು? ಇಷ್ಟು ನಿನಗೆ ಅರ್ಥ ಆಗೋದಿಲ್ಲ?"

ನಾನು ಥರ ಥರ ನಡುಗುತ್ತಿದ್ದೆ. ಸ್ವಲ್ಪ ಹೊತ್ತು ಅಲ್ಲೇ ಕೂತು ಸುಧಾರಿಸಿಕೊಂಡೆ. ಈ ಪುಣ್ಯಾತ್ಮನಿಗೆ ಸಮಾ ಮಂಗಳಾರತಿ ಎತ್ತಿದೆ ಎಂದು ಒಂದು ಥರಾ ಸಮಾಧಾನವೂ ಆಯಿತು. ಗುಡಿಯಿಂದ ಹೊರಬಂದು ನಮ್ಮ ದೇವರನ್ನೊಮ್ಮೆ ದುರುಗುಟ್ಟಿಕೊಂಡು ನೋಡಿ, ಬಾಗಿಲು ಓರೆ ಮಾಡಿ ಬಂದೆ. ದೊಡ್ಡ ದೇವಾಲಯ ನಿಜ, ಆದರೆ ಹಗಲಿನಲ್ಲಿ ದೇವಸ್ಥಾನಕ್ಕೆ ಬಾಗಿಲು ಹಾಕುವ ರೂಢಿ ಇಲ್ಲ, ನಮ್ಮೂರಿನಲ್ಲಿ.

ಮನೆಗೆ ಬಂದು ದೇವರ ಕೋಣೆಯಲ್ಲಿ ಪ್ರಸಾದಗಳನ್ನಿಟ್ಟು ಮಗನ ಬಳಿ ಬಂದು ಕುಳಿತೆ. ಸ್ನಾನ ಮಾಡಿ ಬಂದ ಇವಳು ತಾನು ದೇವರ ಕುಂಕುಮ, ಪ್ರಸಾದ ತೆಗೆದುಕೊಂಡು ಮಗನಿಗೂ